ವಿಮರ್ಶನ ವಿವೇಕ ತೋರಿರುವರು. ಕುವೆಂಪು ಅವರನ್ನು ದಾರ್ಶನಿಕವಾಗಿ ಪ್ರಭಾವಿಸಿದ ಪೂರ್ವಸೂರಿಗಳಾದ ಟ್ಯಾಗೋರ್, ವಿವೇಕಾನಂದ, ಪರಮಹಂಸ, ಅರವಿಂದರು ಇದಕ್ಕೆ ಸಾಕ್ಷಿ. ಹೀಗಾಗಿ ಕುವೆಂಪು ಏಕಕಾಲಕ್ಕೆ ಬಿಬಿಯವರ ಹೇಳಿಕೆಯೊಳಗಿದ್ದ ಸಾಮಾಜಿಕ ಆಶಯವನ್ನು ಸಮರ್ಥಿಸುವ ಮತ್ತು ಸಾಹಿತ್ತಿಕ ಅತಿಯನ್ನು ವಿಮರ್ಶಿಸುವ ಕೆಲಸವನ್ನು ಹುಶಾರಾಗಿ ಮಾಡಿದರು.



ಕುವೆಂಪು

ಆದರೆ, ಬಿಬಿಯವರ ಹೇಳಿಕೆಯಲ್ಲಿ ಕುವೆಂಪು ಪ್ರತಿಪಾದಿಸಿದ ಹಂಸಕ್ಷೀರನಾಯದ ಪ್ರಜ್ಞೆಗಿಂತಲೂ ತುಸು ಭಿನ್ನವಾದ ಉದ್ದೇಶವಿತ್ತು; ಸ್ವಾತಂತ್ರ್ಯ ಸಮಾನತೆಯಂತಹ ಮೌಲ್ಯಗಳಿಲ್ಲದ ಸಾಹಿತ್ಯ, ದರ್ಶನ, ಧರ್ಮ, ಸಂಸ್ಕೃತಿ ಭಾಷೆಗಳನ್ನು ಇಡಿಯಾಗಿ ನಿರಾಕರಿಸುವ, ಸ್ಥಾಪಿತ ವರ್ಗಗಳು ಪವಿತ್ರೀಕರಿಸಿದ ಸಂಗತಿಗಳ ಪಾವಿತ್ರ್ಯ ಭಂಜಿಸುವ ಆಶಯವೂ ಅಲ್ಲಿತ್ತು; ಆ ಮೂಲಕ ಘನತೆಯ ಬದುಕಿಗೆ ಕಾರಣವಾಗಬಲ್ಲ ವಿಮೋಚನ ತತ್ತ್ವ ಮತ್ತು ಚಳವಳಿ ಕಟ್ಟಿಕೊಳ್ಳುವ ಗುರಿಯಿತ್ತು. ಈ ನಂಬಿಕೆ ಪೆರಿಯಾರ್ ಮತ್ತು ಅಂಬೇಡ್ಕರ್ ವೈಚಾರಿಕತೆಯ ಗುಣವೂ ಆಗಿತ್ತು.

ಸಮಾಜದಲ್ಲಿ ದಮನಿತ ವರ್ಗ/ಸಮುದಾಯಗಳು, ತಮ್ಮ ಬಾಳಿನ ಪ್ರಾತಿನಿಧ್ಯವಿಲ್ಲದ, ತಮ್ಮನ್ನು ನಿಕೃಷ್ಟವಾಗಿ ಚಿತ್ರಿಸುವ ಸಾಹಿತ್ಯ ಮತ್ತು ತತ್ತ್ವಶಾಸ್ತ್ರಗಳನ್ನು, ಅವು ಪ್ರಧಾನಧಾರೆಯಲ್ಲಿ ಶ್ರೇಷ್ಠವೆಂದು ಪರಿಗಣಿತವಾಗಿದ್ದರೂ, ನಮ್ಮ ಪಾಲಿಗೆ ನಿರುಪಯುಕ್ತ ಎಂದು ಹೇಳುವ ದಿಟ್ಟತನ ತೋರುತ್ತ ಬಂದಿವೆ. ಪ್ರಾಚೀನ ಸಾಹಿತ್ಯದಲ್ಲಿ ದಲಿತರನ್ನು ಚಿತ್ರಿಸಿರುವ ಕೆಲವು ಭಾಗಗಳನ್ನು ನೋಡಿದರೆ, ಬೂಸಾ ಹೇಳಿಕೆಯ ಸತ್ಯವು ಗೊತ್ತಾಗುತ್ತದೆ. ಕಪ್ಪುಲೇಖಕರು ಹಾಗೂ ಸ್ತ್ರೀವಾದಿಗಳು, ಯೂರೋಪಿನ ಕ್ಲಾಸಿಕಲ್ ಪರಂಪರೆಯ ಶಿಲ್ಪ, ವಾಸ್ತುಕಲೆ, ತತ್ತ್ವಜ್ಞಾನ, ಚಿತ್ರಕಲೆ, ಸಾಹಿತ್ಯಗಳನ್ನು ತೀವ್ರ ಭಂಜನ ಮಾರ್ಗದಲ್ಲೇ ವಿಮರ್ಶಿಸಿದರು. ಆ ಮೂಲಕ ಪರ್ಯಾಯವಾದ ಸಾಹಿತ್ಯ ದರ್ಶನ ಚಳವಳಿ ಕಟ್ಟಿಕೊಂಡರು. ಸಮಸ್ಯೆಯೆಂದರೆ, ಇಂತಹ ಒಳವಿಮರ್ಶೆ ಬಂದಾಗ, ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಅಧಿಕಾರಸ್ಥ ಸಂಸ್ಕೃತಿ, ವಿಮರ್ಶೆ ಮಾಡಿದವರ ಮೇಲೆ ಏರಿಹೋಗುವುದು; ತಮ್ಮನ್ನು ಮರುರಚನೆಗೆ ಒಳಪಡಿಸಿಕೊಳ್ಳುವ ಅವಕಾಶ ಕಳೆದುಕೊಳ್ಳುವುದು.

## ಹುಡುಕಾಟ ನಿರಂತರ

ಯಾವುದೇ ಜೀವಂತ ಸಮಾಜವು ಗಟ್ಟಿ–ಬೂಸಾಗಳನ್ನು ಗುರುತಿಸುವ, ಸ್ವೀಕರಿಸುವ ಮತ್ತು ತಿರಸ್ಕರಿಸುವ ಕಾರ್ಯವನ್ನು ಮಾಡುತ್ತಲೇ ಇರುತ್ತದೆ. ಈ ಪ್ರಜ್ಞೆಯು ಸಮಾಜವು ಚಲನಶೀಲಗೊಳ್ಳುವ ಆರಂಭದ ಬಿಂದು. ಇದೊಂದು ನಿರಂತರ ಹುಡುಕಾಟ. ಇದಕ್ಕೆ ಹತ್ತಾರು ಮುಖಗಳಿವೆ. ಉದಾಹರಣೆಗೆ, ತನ್ನ ಭಾಷೆಯಲ್ಲಿ ಹುಟ್ಟಿದ ಸಾಹಿತ್ಯ ರಾಶಿಯಲ್ಲಿ ಉತ್ತಮ–